ಅಸಲು ದಾವಾ ನಂ. 14/2024 ಪಿಡಬ್ಲೂ : 1

ದಿನಾಂಕಃ 19-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯರ ಪರವಾಗಿಃ ಶ್ರೀ ಎಮ್ ಜಿ ಎಸ್ ವಕೀಲರಿಂದಃ**

2. ಈ ಪ್ರಕರಣ ದಾಖಲಿಸುವ ಪೂರ್ವದಲ್ಲಿ ನಾನು ವಿವಿಧ ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ದಾಖಲಿಸಿ ಅನುಭವ ಇದೆ ಎಂದರೆ ಸರಿ. ನಾನು ದಾವೆಯಲ್ಲಿ ನಾನು ವ್ಯಾಪಾರ ಮಾಡಿಕೊಂಡಿದ್ದೇನೆ ಎಂದು ಬರೆಸಿದ್ದೇನೆ. ನಾನು ಕಾಯಿ , ಅಡಿಕೆ , ಹೂವುಗಳ ವ್ಯಾಪಾರ ಮಾಡುತ್ತೇನೆ . ಕಾಯಿ ವ್ಯಾಪಾರ ಮಾಡಬೇಕಾದರೆ ಎ ಪಿ ಎಮ್ ಸಿ ಯಿಂದ ಲೈಸೆನ್ಸ ಪಡೆಯಬೇಕು ಎಂದರೆ ಸಾಕಿ ನಾನು ಸಣ್ಣ ಪುಟ್ಟ ವ್ಯಾಪಾರ ಮಾಡುತ್ತೇನೆ ಎಂದು ನುಡಿದಿರುತ್ತಾರೆ . ಚಿಲ್ಲರೆ ವ್ಯಾಪಾರಕ್ಕೆ ನಾನು ಮಿರ್ಜಾನ ಗ್ರಾಮ ಪಂಚಾಯತಿಯಿಂದ ಯಾವುದೇ ಪರವಾನಿಗೆಯನ್ನು ಪಡೆದಿಲ್ಲ . ನಾನು ಅಧೀಕೃತ ವ್ಯಾಪಾರ ಮಾಡುತ್ತಿದ್ದೇನೆ ಎಂದು ತೋರಿಸಲು ಸರ್ಕಾರಿ ಕಚೇರಿಯಿಂದ ಪಡೆದ ಯಾವುದೇ ದಾಖಲಾತಿ ಇಲ್ಲ ಎಂದರೆ ಸರಿ . ದಾವೆಯಲ್ಲಿ ಬರೆದಿರುವುದು ಬಿಟ್ಟರೆ ನಾನು ವ್ಯಾಪಾರ ಮಾಡುತ್ತೇನೆ ಎಂದು ತೋರಿಸಲು ಯಾವುದೇ ಕಾಗದ ಪತ್ರ ಇಲ್ಲ ಎಂದರೆ ಸರಿ .

3. ನಾನು ಮನೆಯಲ್ಲಿ ಒಬ್ಬಳೇ ಇರುವುದು . ಹುಡುಗರೆಲ್ಲ ಹೊರಗಡೆ ಇರುತ್ತಾರೆ . ಚಿಕ್ಕ ಪುಟ್ಟ ವ್ಯಾಪಾರದಿಂದ ಬರುವ ಲಾಭ ಕೂಡ ಕಡಿಮೆ ಹಾಗೂ ಅದು ದಿನನಿತ್ಯದ ಖರ್ಚಿಗೆ ಸರಿ ಹೋಗುತ್ತದೆ ಎಂದರೆ ಸರಿಯಲ್ಲ. ಹಿಂದಿನ ಉಳಿತಾಯ ಇರುತ್ತದೆ . ನನಗೆ ಸಣ್ಣ ವ್ಯಾಪಾರದಿಂದ ಲಕ್ಷಾಂತರ ಉಳಿತಾಯ ಇದೆ , ಕಾರಣ ನನ್ನ ಬಿಪಿಎಲ್ ಕಾರ್ಡನ್ನು ರದ್ದು ಪಡಿಸಿ ಎಂದು ಅರ್ಜಿ ಕೊಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನಾನು ಎಪಿಎಲ್ ಕಾರ್ಡ ಹೊಂದಿದ್ದೇನೆ ಎಂದು ನುಡಿದಿರುತ್ತಾರೆ . ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ.

4. 2022 ರಲ್ಲಿ ನನ್ನ ಬಳಿ ಹಣ ಇತ್ತು ಎಂದು ತೋರಿಸಲು ನಾನು ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ . ನನಗೆ ವಿಶ್ವನಾಥ ರತ್ನಾಕರ ದೇಶಭಂಡಾರಿ ಇವರ ಪರಿಚಯ ಇದೆ . ವಿಶ್ವನಾಥ ರತ್ನಾಕರ ದೇಶಭಂಡಾರಿ ಇವರು ನನಗೆ 10–15 ವರ್ಷದಿಂದ ಪರಿಚಯ . ವಿಶ್ವನಾಥ ರತ್ನಾಕರ ದೇಶಭಂಡಾರಿ ಇವರ ವಿರುದ್ಧ ನಾನು ಚೆಕ್ ಬೋನ್ಸ ಕೇಸು ದಾಖಲು ಮಾಡಿದ್ದೇನೆ. ಆ ಪ್ರಕರಣದಲ್ಲಿ ನಾನು ಎಷ್ಟನೇ ಇಸ್ವಿಯಲ್ಲಿ ಎಷ್ಟು ಹಣ ಕೊಟ್ಟಿದ್ದೇನೆ ಎಂದು ಹೇಳಿದ್ದೇನೆ ಎಂದರೆ ಸಾಕ್ಷಿ ಆ ಪ್ರಕರಣ ಬೇರೆ ಈ ಪ್ರಕರಣ ಬೇರೆ ಎಂದು ನುಡಿದಿರುತ್ತಾರೆ . ಆ ಆರ್ಥಿಕ ಸಾಮರ್ಥ್ಯವನ್ನು ಮೀರಿ ಹಣವನ್ನು ಕೊಡಲು ನನ್ನ ಹತ್ತಿರ ಸಾಮರ್ಥ್ಯ ಇತ್ತು ಎಂದು ತೋರಿಸಲು ದಾಖಲಾತಿ ಇದೆ . ನಾನು ಬ್ಯಾಂಕುಗಳಲ್ಲಿ ಸಾಲವನ್ನು ಪಡೆದಿಲ್ಲ.

5. ನಾನು 2009 ನೇ ಇಸ್ವಿಯಲ್ಲಿ ಜಿ ಕೆ ಶಾನಭಾಗ ಇವರ ವಿರುದ್ಧ ಲಕ್ಷಗಟ್ಟಲೆ ಚೆಕ್ ಬೋನ್ಸ ಪ್ರಕರಣ ದಾಖಲು ಮಾಡಿದ್ದೆ ಎಂದರೆ ಸರಿ . ಈ ಪ್ರಕರಣದಲ್ಲಿ ನಾನು ಯಾವ ಯಾವ ದಾಖಲಾತಿಗಳನ್ನು ಹಾಜರು ಪಡಿಸಿದ್ದೇನೆ ತಿಳುವಳಿಕೆ ಮಾಡಿಕೊಂಡಿದ್ದೇನೆ . ಈ ಪ್ರಕರಣದಲ್ಲಿಯ ನಿಪಿ –1 ಚೆಕ್ ಕೇಸನ್ನು ಮುಂದುವರೆಸಲು ಏನು ತೊಂದರೆ ಇತ್ತು ಎಂದರೆ ಸಾಕ್ಷಿ ನಾನು ಅವರನ್ನು ಹಣವನ್ನು ಕೊಡುವಂತೆ ಪರಿ ಪರಿಯಾಗಿ ಕೇಳಿದ್ದೆ , ಅವರು ಕೊಟ್ಟಿಲ್ಲ . ಅವರು ಹಣ ಕೊಡಲಿಲ್ಲ , ಆ ಕಾರಣ ಈ ಕೇಸನ್ನು ಹಾಕಿರುತ್ತೇನೆ. ಇದು ಯಾವ ಸ್ವರೂಪದ ಪ್ರಕರಣ ಎಂದು ನನ್ನ ಗಮನಕ್ಕೆ ಇದೆ . 2022 ನೇ ಇಸ್ವಿಯಲ್ಲಿ 3 ಲಕ್ಷದ 20 ಸಾವಿರ ರೂ.ಗಳಿಗೆ ಚೆಕ್ ಬೋನ್ಸ ಕೇಸನ್ನು ವಿಶ್ವನಾಥ ರತ್ನಾಕರ ದೇಶಭಂಡಾರಿ ಇವರ ವಿರುದ್ಧ ಮಾಡಿರುತ್ತೇನೆ

6. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪ್ರತಿವಾದಿಯ ಜೊತೆಗೆ ಒಂದೇ ಕರಾರನ್ನು ಮಾಡಿಕೊಂಡಿದ್ದೇನೆ . ಕರಾರು ಪತ್ರ ಮಾಡಿಕೊಂಡ ನಂತರ ಓದಿ ತಿಳಿದು ಸಹಿ ಹಾಕುತ್ತೇನೆ ಎಂದರೆ ಸರಿ . ನಿಪಿ–8 ರ ಪ್ರಕಾರ ಇನ್ನೂ ಒಂದು ಕರಾರು ಇರುತ್ತದೆ ಎಂದರೆ ಸರಿಯಲ್ಲ . ನಾನು ಒಂದೆ ಕರಾರು ಪತ್ರ ಮಾಡಿ ಕೊಂಡಿರುತ್ತೇನೆ. ನಿಪಿ–8 ರಲ್ಲಿರುವ ಕರಾರಿನಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ, ಅದನ್ನು ಅವರೇ ಸೃಷ್ಟಿ ಮಾಡಿರಬಹುದು. ನಾನು ಎರಡು ಬಾರಿ ಅವರ ಮನೆಗೆ ಹೋಗಿದ್ದೆ ,ಅವರು ಹಣ ಕೊಡಲಿಲ್ಲ. ನಂತರ

ಅವರೇ ಕುಮಟಾಕ್ಕೆ ಬಂದು ಬಾಂಡ್ ಮೇಲೆ ಸಹಿ ಹಾಕಿ ಅಗ್ರಿಮೆಂಟ್ ಮಾಡಿ ಕೊಟ್ಟಿರುತ್ತಾರೆ . ಅದಕ್ಕೆ ಸಾಕ್ಷಿದಾರರು ಇದ್ದಾರೆ . ಕರಾರಿನ ಮಜಕೂರನ್ನು ನಾನು ಹಾಗೂ ಕಿರಣ ಬಾಡಕರ ವಕೀಲರಲ್ಲಿ ಹೇಳಿ ಬರೆಸಿದ್ದೇವೆ . ನನ್ನ ಮನೆ ಕುಮಟಾದಿಂದ 12 ಕಿಲೋ ಮೀಟರ್ ಆಗುತ್ತದೆ . ಚಂದಾವರ ಹೊನ್ನಾವರ ತಾಲೂಕಿನಲ್ಲಿ ಬರುತ್ತದೆ ಎಂದರೆ ಸರಿ . ನನ್ನ ಹಾಗೂ ಪ್ರತಿವಾದಿಯ ನಡುವೆ 2-3 ವರ್ಷಗಳಿಂದ ಮಾತುಕತೆ ಇಲ್ಲ. ದಿಃ 14-06-2023 ರಂದು ನೋಟಿಸನ್ನು ಕೊಟ್ಟ ನಂತರ ಪ್ರಕರಣ ದಾಖಲು ಮಾಡಲು ಏನು ತೊಂದರೆ ಇರಲಿಲ್ಲ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.